**ದಿನಾಂಕ: 10-01-2019 ರಂದು ಪೂರ್ವಾಹ್ನ 11.00 ಘಂಟೆಗೆ, ಮಾನ್ಯ ಎನ್ ಜಿ. ಟಿ ನ್ಯಾಯಾಲಯದ ಆದೇಶ (673/2018) ದಂತೆ 17 ನದಿಗಳ ವ್ಯಾಪ್ತಿಯಲ್ಲಿ ನೀರಿನ ಮಾಲಿನ್ಯವನ್ನು ತಡೆಯುವ ನಿಟ್ಟಿನಲ್ಲಿ ಮಲಪ್ರಭಾ ಮತ್ತು ಕೃಷ್ಣ ನದಿಗಳ ತೀರದ ಸ್ಥಳೀಯ ಸಂಸ್ಥೆಗಳವರಿಗೆ ರೊಚ್ಚು ನೀರಿನ ಸಂಸ್ಕರಣಾ ಘಟಕವನ್ನು (STP) ಸ್ಥಾಪಿಸುವ ಸಲುವಾಗಿ ಕ್ರಿಯಾ ಯೋಜನೆಯನ್ನು ತಯಾರಿಸಲು ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ ಇವರ ಕಛೇರಿಯಲ್ಲಿ ಯೋಜನಾ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡುವಳಿಗಳು:**

| | | | |
|---|---|---|---|
| 1 | ಅಧ್ಯಕ್ಷತೆ | : | 1. ಶ್ರೀ. ಎಸ್. ಎಸ್. ಬಿರಾದಾರ ಯೋಜನಾ ನಿರ್ದೆಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ. |
| 2 | ಸಭೆಯಲ್ಲಿ ಹಾಜರಿದ್ದ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು | : | 1. ಶ್ರೀ ಗೋಪಾಲಕೃಷ್ಣ ಬಿ. ಸಣತಂಗಿ ಪರಿಸರ ಅಧಿಕಾರಿಗಳು, ಕ.ರಾ.ಮಾ.ನಿ.ಮಂ, ಪ್ರಾದೇಶಿಕ ಕಛೇರಿ, ಬೆಳಗಾವಿ-1.<br>2. ಶ್ರೀ ಜಗದೀಶ್ ಐ.ಎಚ್, ಪರಿಸರ ಅಧಿಕಾರಿಗಳು, ಕ.ರಾ.ಮಾ.ನಿ.ಮಂ, ಪ್ರಾದೇಶಿ ಕಛೇರಿ, ಬೆಳಗಾವಿ-2 (ಚಿಕ್ಕೋಡಿ).<br>3. ಶ್ರೀ ಮತಿ. ರಾಜಶ್ರೀ. ಜ. ಕುಳ್ಳಿ, ಉಪ ಪರಿಸರ ಅಧಿಕಾರಿಗಳು, ಕ.ರಾ.ಮಾ.ನಿ.ಮಂ, ಪ್ರಾದೇಶಿಕ ಕಛೇರಿ, ಬೆಳಗಾವಿ-1.<br>4. ಶ್ರೀ. ಡಿ. ಎಮ ತರಾಡೆ ಎ.ಇ.ಇ, ಡಿಯುಡಿಸಿ, ಬೆಳಗಾವಿ.<br>5. ಶ್ರೀ. ವ್ಹಿ. ಎಲ್. ಚಂದ್ರಪ್ಪಾ, ಎಕ್ಸಿಕ್ಯೂಟಿವ್ ಎಂಜಿನಿಯರ, ಕೆ. ಯು. ಡಬ್ಲೂ. ಎಸ್, ಯ್ಯಾಂಡ ಡಿ ಬಿ. ಬೆಳಗಾವಿ.<br>6. ಶ್ರೀ. ಪಿ ಐ. ಶೆಂಡೂರಿ, ಎ. ಇ. ಇ ಡಿಯುಡಿಸಿ, ಬೆಳಗಾವಿ.<br>7. ಶ್ರೀ. ಮಾನೆ. ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ, ಖಾನಾಪೂರ.<br>8. ಶ್ರೀ. ಎಸ್. ಎಮ. ಕುರಬೇಟ, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ, ಎಂ. ಕೆ. ಹುಬ್ಬಳ್ಳಿ, ಬೈಲಹೊಂಗಲ.<br>9. ಶ್ರೀ. ಕೆ. ಆಯ್. ನಾಗನೂರೆ, ಮುಖ್ಯಾಧಿಕಾರಿ, ಪುರಸಭೆ, ಸವದತ್ತಿ.<br>10. ಶ್ರೀ. ಎಂ ಎಂ. ತಿಮ್ಮಾನೆ, ಮುಖ್ಯಾಧಿಕಾರಿ, ಪುರಸಭೆ, ಮುನವಳ್ಳಿ, ಸವದತ್ತಿ.<br>11. ಶ್ರೀ. ಎಸ್. ಸಿ. ಕಾಗವಾಡ, ಮುಖ್ಯಾಧಿಕಾರಿ, ಪುರಸಭೆ, ರಾಮದುರ್ಗ.<br>12. ಡಾ. ಎಸ್. ಆರ್. ರೋಗಿ, ಮುಖ್ಯಾಧಿಕಾರಿ, ಪುರಸಭೆ, ಚಿಕ್ಕೋಡಿ.<br>13. ಶ್ರೀ. ಪಿ. ಎ. ಕಲ್ಯಾಣಶೆಟ್ಟಿ, ಮುಖ್ಯಾಧಿಕಾರಿ, ಪುರಸಭೆ, ಸದಲಗಾ.<br>14. ಶ್ರೀ. ಎಸ್. ಎ. ಮಹಾಜನ, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ, ಕುಡಚಿ.<br>15. ಶ್ರೀ. ಎಂ. ಎ. ರಾಜಾಪೂರ, ಮುಖ್ಯಾಧಿಕಾರಿ, ಪುರಸಭೆ, ಉಗಾರಖುರ್ದ.<br>16. ಶ್ರಿ ಕೃಷ್ಣ. ಜೆ. ಪೋಳ, ಕಿರಿಯ ಅಬಿಯಂತರರು, ಪಟ್ಟಣ ಪಂಚಾಯತ ಚಿಂಚಲಿ. ರಾಯಭಾಗ.<br>17. ಶ್ರೀ. ಎಸ್. ಓ. ವಾಡೇರ, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ, ಯಕ್ಸಂಭಾ.<br>18. ಶ್ರೀ. ಎಂ ಎಸ್. ಕೌಲಾಪೂರ, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ ಐನಾಪೂರ, ಅಥಣಿ. |

*******

ಮೊದಲನೆಯದಾಗಿ ಸಭೆಯ ಅಧ್ಯಕ್ಷರಾದ ಮಾನ್ಯ ಶ್ರೀ. ಎಸ್. ಎಸ್. ಬಿರಾದಾರ ಯೋಜನಾ ನಿರ್ದೆಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ, ಇವರು ಸಭೆಗೆ ಬಂದ ಎಲ್ಲ ಮುಖ್ಯಾಧಿಕಾರಿಗಳನ್ನು/ಅಧಿಕಾರಿಗಳನ್ನು ಸ್ವಾಗತಿಸಿದರು. ಈ ಸಭೆಯನ್ನು ಕರೆದ ಉದ್ದೇಶ ವಿವರಿಸುತ್ತಾ ಮಾನ್ಯ ಎನ್ ಜಿ. ಟಿ ನ್ಯಾಯಾಲಯದ ಆದೇಶ (673/2018) ದಂತೆ 17 ನದಿಗಳ ವ್ಯಾಪ್ತಿಯಲ್ಲಿ ನೀರಿನ ಮಾಲಿನ್ಯವನ್ನು ತಡೆಯುವ ನಿಟ್ಟಿನಲ್ಲಿ ಮಲಪ್ರಭಾ ಮತ್ತು ಕೃಷ್ಣಾ ನದಿಗಳ ತೀರದ ಸ್ಥಳೀಯ ಸಂಸ್ಥೆಗಳವರಿಗೆ ರೊಚ್ಚು ನೀರಿನ ಸಂಸ್ಕರಣಾ ಘಟಕವನ್ನು (STP) ಸ್ಥಾಪಿಸುವ ಸಲುವಾಗಿ ಕ್ರಿಯಾ ಯೋಜನೆಯನ್ನು ತಯಾರಿಸಲು ಮತ್ತು ರೊಚ್ಚು ನೀರು ನದಿಗಳಿಗೆ ಸೇರದಂತೆ ನಿರ್ವಹಣೆಯ ಬಗ್ಗೆ ಕ್ರಮಗಳನ್ನು ಜರುಗಿಸಬೇಕಾಗಿದೆ. ನದಿಗಳ ಸ್ವಚ್ಚತೆಯನ್ನು ಕಾಪಾಡಿ ನದಿಗಳಲ್ಲಿ ಸ್ವಚ್ಚ ಪರಿಸರವನ್ನು ನಿರ್ಮಿಸುವುದರ ಬಗ್ಗೆ ಸಭೆಯಲ್ಲಿ ತಿಳಿಸಲಾಯಿತು. ಮಾನ್ಯ ಎನ್ ಜಿ. ಟಿ ನ್ಯಾಯಾಲಯದ ನಿರ್ದೇಶನದ ಬಗ್ಗೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳಿಗೆ ಮಾಹಿತಿಯನ್ನು ನೀಡಿದರು.

197

**ಈ ಕೆಳಗಿನ ವಿಷಯಗಳನ್ನು ವಿವರವಾಗಿ ಸಭೆಯಲ್ಲಿ ಚರ್ಚಿಸಲಾಯಿತು:**

- ಮಾನ್ಯ ಎನ್ ಜಿ. ಟಿ ನ್ಯಾಯಾಲಯದ ಆದೇಶ (673/2018) ದಂತೆ 17 ನದಿಗಳ ವ್ಯಾಪ್ತಿಯಲ್ಲಿ ನೀರಿನ ಮಾಲಿನ್ಯವಾಗಿದ್ದು ಇದನ್ನು ತಡೆಯುವ ನಿಟ್ಟನಲ್ಲಿ ಕ್ರಮ ಜರುಗಿಸಬೇಕಾಗಿರುತ್ತದೆ. ಸ್ಥಳೀಯ ಸಂಸ್ಥೆಗಳು ಗೃಹ ಬಳಕೆಯಿಂದ ಉತ್ಪತ್ತಿಯಾಗುವ ರೊಚ್ಚು (sewage) ನೀರನ್ನು ಸಂಸ್ಕರಿಸದೇ ಬಿಟ್ಟ ಸಂದರ್ಭದಲ್ಲಿ ಅದರಿಂದ ನದಿ, ಬಾವಿ, ಕೆರೆಗಳ ನೀರು ಮತ್ತು ಅಂತರ್ಜಲ ಕಲುಷಿತವಾಗುವ ಸಂಭವವಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು. ಈ ರೀತಿ ವಿಸರ್ಜನೆ ಮಾಡುವುದು ಜಲ ಕಾಯ್ದೆಯಡಿಯಲ್ಲಿ ಉಲ್ಲಂಘನೆ ಆಗುತ್ತದೆ. ಸ್ಥಳೀಯ ಸಂಸ್ಥೆಗಳಿಂದ ಕಲುಷಿತ ನೀರಿನ ಸಂಸ್ಕರಣ ಘಟಕವನ್ನು ಅಳವಡಿಸಿರುವುದರ ಬಗ್ಗೆ ಹಾಗೂ ಒಳ ಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಸಲುವಾಗಿ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ನೀಡಲು ತಿಳಿಸಲಾಯಿತು.

- ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಬರತಕ್ಕಂತಹ ಸರ್ವಿಸ್ ಸ್ಟೇಷನ್ನಗಳು ಇದ್ದರೆ ಅವುಗಳಿಗೆ ಸಂಸ್ಕರಣಾ ಘಟಕವನ್ನು ಅಳವಡಿಸುವುದು ಮತ್ತು ಹಾಸ್ಪಿಟಲ್ ಹಾಗೂ ನರ್ಸಿಂಗ್ ಹೋಂಗಳಿಂದ ವೈದ್ಯಕೀಯ ತ್ಯಾಜ್ಯವನ್ನು ನೇರವಾಗಿ ಗಟಾರಿನಲ್ಲಿ ಬಿಡದೇ ಸಂಸ್ಕರಿಸಿ ಬಿಡಲು ಕ್ರಮ ಜರುಗಿಸಲು ಎಲ್ಲಾ ಸ್ಥಳೀಯ ಸಂಸ್ಥೆಗಳವರಿಗೆ ನಿರ್ದೇಶನ ನೀಡಿದರು.

- ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ಲ್ಯಾಸ್ಟಿಕ್ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸುವುದು ಮತ್ತು ಮಾರಾಟ ಮಾಡುವವರ ಮೇಲೆ ಯೋಗ್ಯ ಕ್ರಮವನ್ನು ಜರುಗಿಸಲೂ ಸಹ ಮಾನ್ಯ ನಿರ್ದೇಶಕರು ಸಭಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚನೆಯನ್ನು ನೀಡಿದರು.

- ಮಾನ್ಯ ಎನ್ ಜಿ. ಟಿ ನ್ಯಾಯಾಲಯದ ಆದೇಶ (673/2018) ದಂತೆ, ಈಗಾಗಲೇ ರಾಜ್ಯ ಮಟ್ಟದಲ್ಲಿ ಮಾನ್ಯ ಸರಕಾರಿ ಅಧೀನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ. ಅದರಂತೆ ಜಿಲ್ಲಾಮಟ್ಟದಲ್ಲಿಯೂ ಕೂಡ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ (ಕರ್ನಾಟಕ ಸರಕಾರದ ಆದೇಶ ಸಂಖ್ಯೆ. FEE 214 EPC 2018, Bangaluru Dated: 03-01-2019) ಸಮಿತಿಯನ್ನು ರಚಿಸಲಾಗಿದೆ. ಸಮಿತಿಯು ಪ್ರತಿ ತಿಂಗಳು ಕ್ರಿಯಾ ಯೋಜನೆಯ ಅನುಷ್ಠಾನದ ಮತ್ತು ನದಿಗಳ ಮಾಲಿನ್ಯ ತಡೆಗಟ್ಟುವಲ್ಲಿ ತೆಗೆದುಕೊಂಡ ವಿವರಗಳನ್ನು ಸಂಗ್ರಹಿಸಿ ಅದನ್ನು ರಾಜ್ಯ ಮಟ್ಟದ ಸಮಿತಿಗೆ ಕಳುಹಿಸಿಕೊಡಬೇಕು ಮತ್ತು ರಾಜ್ಯ ಮಟ್ಟದ ಸಮಿತಿಯು ಸದರಿ ವಿವರಗಳನ್ನು ಕ್ರೋಡಿಕರಿಸಿ ಪ್ರತಿ ಮೂರು ತಿಂಗಳಿಗೊಮ್ಮೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ನವದೆಹಲಿ ಇವರಿಗೆ ಕಳುಹಿಸಿಕೊಡಬೇಕಾಗಿರುತ್ತದೆ.

- ಕ್ರೀಯಾ ಯೋಜನೆಯನ್ನು 31-01-2019 ರ ಒಳಗಾಗಿ ಸಲ್ಲಿಸದೇ ಇದ್ದ ಪಕ್ಷದಲ್ಲಿ ಪರಿಸರದ ಮೇಲೆ ಆಗತಕ್ಕಂತಹ ಅನಾಹುತಗಳಿಗೆ ನೇರವಾಗಿ ಆಯಾ ಸರಕಾರ/ಕೇಂದ್ರಾಳಿತ ಪ್ರದೇಶ ಇವರನ್ನು ಹೊಣೆಗಾರರನ್ನಾಗಿ ಮಾಡುವುದು. ನದಿಗಳ ಮಾಲಿನ್ಯವನ್ನು ಮಾನ್ಯ ಎನ್ ಜಿ. ಟಿ ನ್ಯಾಯಾಲಯವು ಆದ್ಯತೆಯ ಆಧಾರದ ಮೇಲೆ ಐದು ಭಾಗಗಳನ್ನಾಗಿ ಮಾಡಿರುತ್ತದೆ. ಪ್ರತಿ ಹಂತದಲ್ಲಿ ಒಂದು ಕೋಟಿಯಿಂದ 25 ಲಕ್ಷಗಳವರೆಗೆ ದಂಡವನ್ನು ವಸೂಲು ಮಾಡಲಾಗುವುದು. ಈ ದಂಡದ ಹಣವನ್ನು ಸಂಬಂಧಿಸಿದ ಸರಕಾರ/ಕೇಂದ್ರಾಳಿತ ಪ್ರದೇಶ ಇವರು ತುಂಬ ಬೇಕಾಗುತ್ತದೆ. ಇನ್ನು ಆ ದಂಡದ ಹಣವನ್ನು ಆಯಾ ತಪ್ಪಿತಸ್ಥ ಅಧಿಕಾರಿಗಳಿಂದ ವಸೂಲಿ ಮಾಡಲು ಸಹ ಮಾನ್ಯ ಎನ್ ಜಿ. ಟಿ ನ್ಯಾಯಾಲಯವು ಆಯಾ

ಸರಕಾರ/ಕೇಂದ್ರಾಳಿತ ಪ್ರದೇಶ ಇವರಿಗೆ ಅಧಿಕಾರವನ್ನು ನೀಡಿರುತ್ತದೆ ಎಂದು ಸಭೆಗೆ ಶ್ರೀ ಗೋಪಾಲಕೃಷ್ಣ. ಬಿ. ಸಣತಂಗಿ, ಪ್ರಾದೇಶಿಕ ಕಛೇರಿ, ಬೆಳಗಾವಿ-1 ಇವರು ಸಭೆಗೆ ತಿಳಿಸಿದರು.

- ನದಿ, ಕೆರೆ ಮತ್ತು ಹಳ್ಳಗಳ ತೀರದಲ್ಲಿ ಯಾವುದೇ ತರಹದ ಘನ ತ್ಯಾಜ್ಯವನ್ನು ಹಾಕಲು ಅನುವು ಮಾಡಿಕೊಡಬಾರದು ಎಂದು ಶ್ರೀ. ಜಗದೀಶ. ಐ. ಹೆಚ್, ಪ್ರಾದೇಶಿಕ ಕಛೇರಿ, ಬೆಳಗಾವಿ-2 (ಚಿಕ್ಕೋಡಿ) ಇವರು ಸಭೆಗೆ ತಿಳಿಸಿದರು.

- ಶ್ರೀ. ವ್ಹಿ. ಎಲ್. ಚಂದ್ರಪ್ಪಾ ಎಕ್ಸಿಕ್ಯೂಟಿವ್ ಎಂಜಿನಿಯರ, ಕೆ. ಯು. ಡಬ್ಲೂ. ಎಸ್, ಯ್ಯಾಂಡ ಡಿ ಬಿ. ಬೆಳಗಾವಿ ಇವರು, ಎಲ್ಲಾ ಸ್ಥಳೀಯ ಸಂಸ್ಥೆಗಳ ಎಸ್.ಟಿ. ಪಿ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದರು. ರಾಮದುರ್ಗ ಟಿಎಂಸಿ ಯಲ್ಲಿ ಮಾತ್ರ ಯು.ಜಿ.ಡಿ. ಕಾರ್ಯ ಮುಗಿದಿದ್ದು ಹಾಗೂ ಸವದತ್ತಿ ಪಟ್ಟಣಕ್ಕೆ ಎಸ್ ಟಿ ಪಿ ಸಲುವಾಗಿ ಡಿ ಪಿ ಎ ಆರ್ ಮಾಡಲಾಗಿರುತ್ತದೆ ಹಾಗೂ ಇನ್ನುಳಿದ ಸ್ಥಳೀಯ ಸಂಸ್ಥೆಗಳಲ್ಲಿ ಡಿ ಪಿ ಎ ಆರ್ ನ್ನು ತಯಾರಿಸಬೇಕಾಗಿದೆ. ಪುರಸಬೆ, ಚಿಕ್ಕೋಡಿ ಮತ್ತು ಪುರಸಭೆ, ಸದಲಗಾಗಳಲ್ಲಿ ಎಸ್ ಟಿ ಪಿ ಕಾರ್ಯಚರಣೆಯಲ್ಲಿದ್ದು, ಯು ಜಿ ಡಿ ಕಾರ್ಯವನ್ನು ಸಂಪೂರ್ಣವಾಗಿ ಮಾಡಬೇಕಾಗಿರುತ್ತದೆ ಎಂದು ತಿಳಿಸಿದರು.

- ಶ್ರೀ. ಡಿ. ಎಮ ತರಾಡೆ ಎ.ಇ.ಇ ಡಿಯುಡಿಸಿ ಇವರು ಎಲ್ಲಾ ಸ್ಥಳೀಯ ಸಂಸ್ಥೆಗಳವರಿಗೆ ಆದಷ್ಟು ಬೇಗನೆ ರೊಚ್ಚು ನೀರು ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಸೂಚಿಸಿದರು.

ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ವಿವರವಾದ ಅನುಸರಣಾ ವರದಿಯನ್ನು ಸಲ್ಲಿಸಲು ಸೂಚಿಸಲಾಯಿತು.

ಮೇಲಿನ ಚರ್ಚೆಯೊಂದಿಗೆ ಹಾಜರಿದ್ದ ಸ್ಥಳೀಯ ಸಂಸ್ಥೆಯ ಅಧಿಕಾರಿಗಳಿಗೆ ನದಿಗಳ ಮಾಲಿನ್ಯವನ್ನು ತಡೆಯುವ ಸಲುವಾಗಿ ರೊಚ್ಚು ನೀರಿನ ಸಂಸ್ಕರಣಾ ಘಟಕವನ್ನು (STP) ಸ್ಥಾಪಿಸುವ ಸಲುವಾಗಿ ಕ್ರಿಯಾ ಯೋಜನೆಯನ್ನು ತಯಾರಿಸುವುದು ಮತ್ತು ರೊಚ್ಚು ನೀರು ನದಿಗಳಿಗೆ ಸೇರದಂತೆ ನಿರ್ವಹಣೆಯ ಬಗ್ಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಮತ್ತು ಮಾನ್ಯ ಎನ್.ಜಿ.ಟಿಯ ಆದೇಶವನ್ನು ತಪ್ಪದೇ ಪಾಲಿಸಬೇಕು ಎಂಬ ವಿವರಣೆಯನ್ನು ನೀಡಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ,
ಬೆಳಗಾವಿ.